ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದಃ

4 ನೇ ಪ್ರತಿವಾದಿ ನಮ್ಮ ಊರಿನವರು. ನನ್ನ ತಂದೆಯ ಹೆಸರು ಕದುರಪ್ಪ . 3 ನೇ ಪ್ರತಿವಾದಿಯ ಅಣ್ಣನ ಮಗಳನ್ನುನೀವು ವಿವಾಹವಾಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ದೊಡ್ಡಪ್ಪನ ಮಗಳನ್ನು ವಿವಾಹವಾಗಿರುತ್ತೇನೆ ಎಂದು ನುಡಿದಿರುತ್ತಾರೆ. ಸಂಬಂಧದಲ್ಲಿ 3 ನೇ ಪ್ರತಿವಾದಿಯು ನನಗೆ ಯಾವುದೇ ರೀತಿಯಲ್ಲಿ ಸಂಬಂಧವನ್ನು ಹೊಂದಿರುವುದಿಲ್ಲ . ಅವರ ಅಣ್ಣ ತಮ್ಮರ ಮಕ್ಕಳನ್ನುನಾನು ವಿವಾಹವಾಗಿರುತ್ತೇನೆ ಅಷ್ಟೇ . ನಾನು ಮತ್ತು 3 ನೇ ಪ್ರತಿವಾದಿ ಬಾವ ಮತ್ತು ಬಾವ ಮೈದುನಾ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದು ನನಗೆ ಗೊತ್ತಿದೆ. ಯಾವ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ಸ್ವತ್ತಿನ ಮೇಲೆ ದಾವೆಯನ್ನು ಹಾಕಿರುತ್ತಾರೆ ಎಂದು ನನಗೆ ಗೊತ್ತಿದೆ . ದಾವಾ ಸ್ವತ್ತುಗಳು ಸರ್ವೇ ನಂ. 24/3 ರಲ್ಲಿ 6 ಚಿಲ್ಲರೆ ಎಕರೆ ಮತ್ತು ಸರ್ವೇ ನಂ. 24/5 ರಲ್ಲಿ 8 ಮುಕ್ಕಾಲು ಎಕರೆ ಸ್ವತ್ತಿಗಾಗಿ ದಾವೆಯನ್ನು ಸಲ್ಲಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂಬುದನ್ನು ತಿಳಿದುಕೊಂಡಿರುವುದಿಲ್ಲ. ವಾದಿ ಮತ್ತು ಅವರ ಪೂರ್ವಜರು ರಂಗಪ್ಪನಹಳ್ಳಿಗೆ ಸೇರಿದವರು ಎಂದರೆ ಅವರ ಅಜ್ಜ ಇದ್ದರು ಎಂದು ನನಗೆ ಗೊತ್ತು ಮತ್ತು ಅವರು ಜಮೀನನ್ನು ಮಾರಿಕೊಂಡು ಹೋಗಿರುತ್ತಾರೆ. ಸರ್ವೇ ನಂ. 24/3 ರಲ್ಲಿ ಗೋವಿಂದಪ್ಪ ಮತ್ತು ಗೋವಿಂದಪ್ಪನವರ ಮಕ್ಕಳು ಜಯಮ್ಮ ಎನ್ನುವವರಿಗೆ 2

ಎಕರೆಯನ್ನು ಮಾರಾಟ ಮಾಡಿರುತ್ತಾರೆ. ದೊಡ್ಡಕರಿಯಪ್ಪ ಎನ್ನುವವರಿಗೆ 2 ಎಕರೆ ಮಾರಿರುತ್ತಾರೆ ಮತ್ತು ಸಣ್ಣ ಕರಿಯಪ್ಪನಿಗೆ 1 ಎಕರೆ 15 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ. ಸರ್ವೇ ನಂ. 24/5 ರಲ್ಲಿ ಗೋವಿಂದಪ್ಪ ನವರ ಅಜ್ಜನಾದ ಮೇಗಳಮನೆ ಕರಿಯಪ್ಪ ಇವರು ಪಟೇಲ್ ಏಕಾಂತಪ್ಪ ಇವರಿಗೆ 3 ಎಕರೆಯನ್ನು ಮಾರಾಟ ಮಾಡಿರುತ್ತಾರೆ. ಶೇಖರಪ್ಪ ಎನ್ನುವವರಿಗೆ 2 ಎಕರೆ ಮಾರಾಟ ಮಾಡಿರುತ್ತಾರೆ. ಮಲ್ಲಮ್ಮ ಕೋಂ ಚಂದ್ರಪ್ಪ ಎನ್ನುವವರಿಗೆ 2 ಎಕರೆ ಮಾರಾಟ ಮಾಡಿರುತ್ತಾರೆ. ಲಕ್ಷ್ಮಮ್ಮ ನವರು ದಾವಾ ಸ್ವತ್ತನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಅವರು ಸೇರಿ ಮಾರಾಟ ಮಾಡಿರುತ್ತಾರೆ . ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ಮೇಲೆ ಹೇಳಿದ ಸ್ವತ್ತುಗಳು ದಾವಾ ಸ್ವತ್ತುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಚಾರವನ್ನು ನನ್ನ ತಂದೆಯವರು ಮಾತನಾಡಿ ನನಗೆ ಗೊತ್ತಿರುತ್ತದೆ . ನನಗೆ ಖುದ್ದು ಅದರ ಬಗ್ಗೆ ಮಾಹಿತಿ ಇಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಪತ್ರಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 50 ವರ್ಷಗಳಿಂದ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ.

ದಾವಾ ಸ್ವತ್ತುಗಳು ಮೂಲತಃ ರಂಗವ್ವನಹಳ್ಳಿ ಗ್ರಾಮಕ್ಕೆ ಸೇರಿರುತ್ತವೆ ಎಂದರೆ ಸರಿ. ದಾವಾ ಸ್ವತ್ತಿನ ಪಕ್ಕದಲ್ಲಿ ನಿಮ್ಮ ಜಮೀನು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ 2 ಸ್ವತ್ತುಗಳ ನಡುವೆ ರಸ್ತೆ ಇದ್ದು ನಂತರ ನನ್ನ ಸ್ವತ್ತು ಬರುತ್ತದೆ ಎಂದು ನುಡಿದಿರುತ್ತಾರೆ . ನನ್ನ ಸ್ವತ್ತಿನ ಸರ್ವೇ ನಂ. 38. ನನ್ನ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಮೊರಾರ್ಜಿ ಶಾಲೆ , ಪಶ್ಚಿಮ್ಮಕ್ಕೆ ವಾಚಾನಾಯಕ , ಉತ್ತರಕ್ಕೆ ನರಸಿಂಹಪ್ಪ , ದಕ್ಷಿಣಕ್ಕೆ ಸಿದ್ದರಾಮಪ್ಪ ಇರುತ್ತದೆ. ಕರಿಯಪ್ಪನವರಿಗೆ 3 ಜನ ಹೆಂಡತಿಯರು ಇರುವ ವಿಚಾರವನ್ನು ನಾವು ಚಿಕ್ಕವರಿದ್ದಾಗ ನನ್ನ ತಂದೆ ಮಾತನಾಡುತ್ತಿದ್ದರು. ಕರಿಯಪ್ಪನವರು 3 ಜನ ಹೆಂಡತಿಯರಿಗೆ

ಸ್ವತ್ತುಗಳನ್ನು ಹಂಚಿಕೆ ಮಾಡಿರುವ ವಿಚಾರ ನನಗೆ ನನ್ನ ತಂದೆಯಿಂದ ತಿಳಿದಿರುತ್ತದೆ , ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳನ್ನು ವಾದಿಯೇ ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಮಾರಾಟವಾಗಿರುವುದಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.24/3 ರಲ್ಲಿ ಪೂರ್ವಕ್ಕೆ ಭಾಗನಾಯಕ , ಪಶ್ಚಿಮಕ್ಕೆ ದಾಸಪ್ಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ಲಕ್ಷ್ಮಣ ಈ ಚಕ್ಕುಬಂದಿಯ ನಡುವೆ ಪ್ರತಿವಾದಿಗಳ ಯಾವುದೇ ಸ್ವತ್ತು ಇಲ್ಲ ಎಂದರೆ ಸಾಕ್ಷಿಯು ಈ ಚಕ್ಕುಬಂದಿ ನಡುವೆ ಯಾವುದೇ ಸ್ವತ್ತು ಇಲ್ಲ ಎಂದು ನುಡಿದಿರುತ್ತಾರೆ . ಈ ಚಕ್ಕುಬಂದಿಯ ನಡುವೆ ವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ . ವಾದಿಗೆ ಅವರ ತಾಯಿಯಿಂದ ದಾನವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.25/5 2 ಎಕರೆ 17 ಗುಂಟೆ ಸ್ವತ್ತು ಚಕ್ಕುಬಂದಿ ಪೂರ್ವಕ್ಕೆ ದಾಸಪ್ಪ , ಪಶ್ಚಿಮಕ್ಕೆ ಸಿದ್ದಪ್ಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ದನವಿನ ಓಣಿ ಈ ಚಕ್ಕುಬಂದಿಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಚಕ್ಕುಬಂದಿ ಸರಿ ಇರುವುದಿಲ್ಲ ಎಂದು ನುಡಿದಿರುತ್ತಾರೆ . ಸದರಿ ಚಕ್ಕುಬಂದಿಯ ನಡುವೆ ವಾದಿಯು ಇದ್ದು ಸದರಿ ವಿಚಾರ ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ಕಾಗದ ಪತ್ರಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯೇ ಸ್ವಾಧೀನಾನುಭವ ಹೊಂದಿದ್ದರೂ ಸಹ 3 ನೇ ಪ್ರತಿವಾದಿಯ ಮೇಲಿನ ಸಂಬಂಧದ ಕಾರಣ ಪ್ರತಿವಾದಿಗಳ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಪ್ರತಿವಾದಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ**
**ನಾಯ್ಯಾಧೀಶರು, ಹೊಸದುರ್ಗ.**

ಓ ಎಸ್ ನಂ:398/19
ಡಿ.ಡಬ್ಲ್ಯೂ -4
ದಿನಾಂಕ: 12.03.2026.

ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದ:

ವಾದಿಯು ಪ್ರತಿವಾದಿಗಳ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ. ಯಾವ ಪರಿಹಾರವನ್ನು ಕೇಳಿ ದಾವೆ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ಸರ್ವೇ ನಂ.24 ರಲ್ಲಿ 8 ಎಕರೆ ಮತ್ತು 6 ಎಕರೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ವಾದಿಯ ಪೂರ್ವಜರು ಮೂಲತಃ ರಂಗವ್ವನಹಳ್ಳಿಗೆ ಸೇರಿದವರು ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಅಜ್ಜ ಮೂಲತಃ ರಂಗವ್ವನಹಳ್ಳಿಗೆ ಸೇರಿದವರಾಗಿದ್ದು ದಾವಾ ಸ್ವತ್ತುಗಳು ಅವರಿಗೆ ಸೇರಿರುವುದಾಗಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8 ಎಕರೆಯನ್ನು ಪಟೇಲ್ ಏಕಾಂತಪ್ಪ , ತನ್ನೆನಹಳ್ಳಿ ರಂಗಪ್ಪ , ಮಲ್ಲಮ್ಮ , ಕರಿಯಪ್ಪ , ನಂಜುಡಪ್ಪ ಇವರಿಗೆ ಮೇಗಳಮನೆ ಕರಿಯಪ್ಪನ ಮಕ್ಕಳು ಸರ್ವೇ ನಂ.24 ರಲ್ಲಿ ಮಾರಾಟ ಮಾಡಿರುತ್ತಾರೆ. ಮಾರಾಟವಾಗಿರುವ ವಿಚಾರವನ್ನು ನನಗೆ ಯಾರು ಹೇಳಿರುವುದಿಲ್ಲ . ಅದಕ್ಕೆ ಸಂಬಂಧಿಸಿದ ಪತ್ರಗಳನ್ನು ನಾನು ನೋಡಿರುವುದಿಲ್ಲ. ದಾವಾ 1 ನೇ ಸ್ವತ್ತನ್ನು ಯಾರು ಅನುಭವಿಸುತ್ತಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ದಾವಾ 2 ನೇ ಸ್ವತ್ತನ್ನು 3 ನೇ ಪ್ರತಿವಾದಿ ಅನುಭವಿಸುತ್ತಿದ್ದಾರೆ . ನಾನು 3 ನೇ ಪ್ರತಿವಾದಿಯ ಅನುಭವಿಸುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅದನ್ನು ವಾದಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ವಾದಿ

ಅಥವಾ ಅವರ ತಾಯಿ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ತಾಯಿ ಲಕ್ಷ್ಮಮ್ಮ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ನವರು ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ವಾದಿಯ ತಾಯಿಯು ಜೀವಂತವಿದ್ದಾಗ ಅವರೇ ಅನುಭವಿಸಿಕೊಂಡು ಹೋಗುತ್ತಿದ್ದು ಅವರ ಮರಣಾನಂತರ ವಾದಿಯು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಏಕಾಂತಪ್ಪ , ತನ್ನೆನಹಳ್ಳಿ ರಂಗಪ್ಪ ಮತ್ತು ಇತರರು ಎಷ್ಟು ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಜಮೀನುಗಳನ್ನು ಅವರುಗಳು ಅನುಭಸುತ್ತಿದ್ದಾರಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅಕ್ಕ ಪಕ್ಕ ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನಿನ ಸರ್ವೇ ನಂ. 25 ಆಗಿದ್ದು ದಕ್ಷಿಣಕ್ಕೆ ನನ್ನ ಸ್ವತ್ತು ಇರುತ್ತದೆ ಎಂದು ನುಡಿದಿರುತ್ತಾರೆ . ನನ್ನ ಸ್ವತ್ತಿನ ಪೂರ್ವಕ್ಕೆ ಕುಮಾರಪ್ಪ , ಪಶ್ಚಿಮಕ್ಕೆ ಹಿರಿಯಪ್ಪ , ಉತ್ತರಕ್ಕೆ ಕುಮಾರಪ್ಪ , ದಕ್ಷಿಣಕ್ಕೆ ರಾಜಪ್ಪ ಬರುತ್ತಾರೆ. 4 ನೇ ಪ್ರತಿವಾದಿ ನಾನು ಸಂಬಂಧಿಕರು ಎಂದರೆ ಸರಿ. ಒಂದೇ ಊರಿನವರಾಗಿದ್ದು ಸಂಬಂಧಿಕರಾಗಿರುತ್ತೇವೆ . ಯಾವ ರೀತಿ ಎಂದು ಹೇಳಲು ಸಾಧ್ಯವಿಲ್ಲ. ಸಂಬಂಧಿಕರಾಗಿರುವ ಕಾರಣ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ ವಾದಿಯ ತಾಯಿಯವರಿಗೆ ದಾನವಾಗಿ ಬಂದಂತಹ ಸ್ವತ್ತುಗಳು ಆಗಿದ್ದು ವಾದಿಯೇ ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರಗಳು ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ಮತ್ತು ದಾವಾ ಸ್ವತ್ತುಗಳಿಗೆ ಸಂಬಂಧ ಇಲ್ಲದೇ ಇದ್ದರೂ ಸಹ , 4 ನೇ ಪ್ರತಿವಾದಿ ಸಂಬಂಧಿಕರಾಗಿರುವ ಕಾರಣ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಸರ್ವೇ ನಂ.24 ರಲ್ಲಿ ಮಾರಾಟ ಮಾಡಿರುವ ವಿಚಾರ ತಿಳಿಸಿದ್ದು ಸದರಿ ಸರ್ವೇ ನಂಬರ್ ಗಳ ಪೋಡುಗಳನ್ನು ಹೇಳಲು ಸಾಧ್ಯವಿಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.

ಓ ಎಸ್ ನಂಃ398/19
ಡಿ.ಡಬ್ಲ್ಯೂ -5
<u>ದಿನಾಂಕಃ 12.03.2026.</u>

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದಃ</u>

ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ . ಈ ದಾವೆಯನ್ನು ಕರಿಯಪ್ಪನ ಮೇಲೆ ಸಾವಿತ್ರಮ್ಮ ಹಾಕಿರುತ್ತಾರೆ. ಯಾವ ಕಾರಣಕ್ಕೆ ದಾವೆ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ . ನನಗೆ 4 ನೇ ಪ್ರತಿವಾದಿ ಚಿಕ್ಕಪ್ಪ ಆಗಬೇಕು. ನನಗೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ವಿಚಾರ ಗೊತ್ತಿದೆ . ವಾದಿಯು ಸರ್ವೇ ನಂ.24/ಪಿ 3 ರಲ್ಲಿ 6 ಎಕರೆಗಾಗಿ ದಾವೆ ಸಲ್ಲಿಸಿರುತ್ತಾರೆ ಮತ್ತು 8 ಎಕರೆ ಮೇಲೆ ಕೇಸು ಹಾಕಿರುತ್ತಾರೆ. ವಾದಿ ಮತ್ತು ಅವರ ಪೂರ್ವಜರು ರಂಗವ್ವನಹಳ್ಳಿಗೆ ಸೇರಿದವರು ಎಂದರೆ ಸರಿ. ದಾವಾ ಸ್ವತ್ತುಗಳು ರಂಗವ್ವನಹಳ್ಳಿಯಲ್ಲಿಯೇ ಇವೆ ಎಂದರೆ ಸರಿ. ದಾವಾ 1 ಮತ್ತು 2 ನೇ ಸ್ವತ್ತುಗಳು ವಾದಿಯ ತಾಯಿಯವರಿಗೆ ಅವರ ತಂದೆಯಾದ ಕರಿಯಪ್ಪನವರಿಂದ ದಾನವಾಗಿ ಬಂದ ಸ್ವತ್ತುಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ಸಾವಿತ್ರಮ್ಮನವರ ತಾಯಿ ಮೊದಲು ಸ್ವಾಧೀನಾನುಭವದಲ್ಲಿ ಇದ್ದು ಈಗ ವಾದಿ ಅಂದರೆ ಸಾವಿತ್ರಮ್ಮನವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅಕ್ಕ ಪಕ್ಕ ನನ್ನ ಜಮೀನು ಇರುತ್ತದೆ . ನನ್ನ ಸ್ವತ್ತಿನ ಸರ್ವೇ ನಂ.24/ಪಿ 2 ಒಟ್ಟು ವಿಸ್ತೀರ್ಣ 5 ಎಕರೆ 16 ಗುಂಟೆ ಆಗಿದ್ದು ಅದರ ಚಕ್ಕುಬಂದಿ ಪೂರ್ವಕ್ಕೆ ದೊಡ್ಡ ಕರಿಯಪ್ಪ , ಪಶ್ಚಿಮಕ್ಕೆ ಸಣ್ಣ ಬೀರಪ್ಪ ,ಉತ್ತರಕ್ಕೆ ಊರುಕಟ್ಟೆಯ ಗಡಿ , ದಕ್ಷಿಣಕ್ಕೆ ಸಣ್ಣ ಬೈರಪ್ಪ ಸಿದ್ದಪ್ಪ ಆಗಿರುತ್ತದೆ. ಕರಿಯಪ್ಪ ನವರು ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುವ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ

ಎಂದರೆ ಸರಿ. ಲಕ್ಷ್ಮಮ್ಮ ನವರು ಸ್ವತ್ತುಗಳನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಲಕ್ಷ್ಮಮ್ಮ ನವರು ದಾನವಾಗಿ ಬಂದಾಗಿನಿಂದ ಅವರೇ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಲಕ್ಷ್ಮಮ್ಮ ನನ್ನು ನೋಡಿದ್ದೇನೆ. ಲಕ್ಷ್ಮಮ್ಮ ನವರು ರಂಗವ್ವನಹಳ್ಳಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅವರನ್ನು ಹಾಲೇನಹಳ್ಳಿಗೆ ಕೊಟ್ಟು ವಿವಾಹ ಮಾಡಿದ್ದು ಅಲ್ಲಿಯೇ ಮರಣ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೇ ನಂ.24/3 ಪಿ ರ ಚಕ್ಕುಬಂದಿ ಪಶ್ಚಿಮಕ್ಷ ನಾಗಪ್ಪ ಮುದ್ದರಂಗಪ್ಪ , ಪಶ್ಚಿಮಕ್ಕೆ ಸಣ್ಣ ಬೈರಪ್ಪ ಸಿದ್ದಪ್ಪ , ಉತ್ತರಕ್ಕೆ ಕರಿಯಪ್ಪ , ದಕ್ಷಿಣಕ್ಕೆ ದನವಿನ ಓಣಿ, ಪ್ರತಿವಾದಿಗಳಿಗೂ ದಾವಾ 1 ನೇ ಆಸ್ತಿ ಚಕ್ಕುಬಂದಿ ಪೂರ್ವಕ್ಕೆ ಭಾಗಣ್ಣ ನಾಯಕ, ಪಶ್ಚಿಮ್ಮ ದಾಸಪ್ಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ಲಕ್ಷ್ಮಪ್ಪ ಇದಕ್ಕೂ ಸಂಬಂಧ ಇಲ್ಲ ಎಂದರೆ ಸರಿ. ಪ್ರತಿವಾದಿಗಳಿಗೂ ದಾವಾ 2 ನೇ ಆಸ್ತಿ ಚಕ್ಕುಬಂದಿ ಪೂರ್ವಕ್ಕೆ ದಾಸಪ್ಪ , ಪಶ್ಚಿಮ್ಮ ಸಿದ್ದಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ದನವಿನ ಓಣಿ ಇದಕ್ಕೂ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಮಾರಾಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.24/3 ರಲ್ಲಿ 1 ಎಕರೆ 10 ಗುಂಟೆಯನ್ನು ಲಕ್ಷ್ಮಮ್ಮನವರು ಕರಿಯಪ್ಪನವರಿಗೆ (3 ನೇ ಪ್ರತಿವಾದಿ) ಮಾರಾಟ ಮಾಡಿರುತ್ತಾರೆ. ಮಾರಾಟದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ . ನನ್ನ ತಂದೆಯವರು ಮಾತನಾಡುತ್ತಿದ್ದರು ಆದ್ದರಿಂದ ನನಗೆ ಸದರಿ ವಿಚಾರ ತಿಳಿದಿರುತ್ತದೆ. ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ನನ್ನ ಸಂಬಂಧಿಕರಾಗಿರುವ ಕಾರಣ ಪ್ರತಿವಾದಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.